ವಿ.ಎಲ್. ಪ್ರಕಾಶ್

# ನಿರ್ಗಮನ

ಆ ದಿನ ಅವರು ಎಂದಿನಂತಿಲ್ಲ ಎಂಬ ಅನುಮಾನ ನನ್ನಲ್ಲಿ ಕೊರೆಯುತ್ತಿತ್ತು. ಅವರ ಸಹಾಯಕನಾಗಿ ಕಳೆದ ನಾಲ್ಕು ವರ್ಷಗಳಿಂದ ಅವರನ್ನು ಬಲ್ಲೆ. ಚಲನಚಿತ್ರ ರಂಗದಲ್ಲಿ ಎಷ್ಟೋ ಮಂದಿ ಗೆಳೆಯರು ಅವರಿಗೆ ಇದ್ದರೂ ಅವರು ತಾವು, ತಮ್ಮ ಕೆಲಸವಾಯಿತು ಎಂಬಂತೆ ಇರುತ್ತಿದ್ದರು. ಒಂದೊಮ್ಮೆ ಸೂಪರ್‌ಹಿಟ್ ಚಿತ್ರಗಳಲ್ಲಿ ನಾಯಕನಾಗಿ ಮರ ಸುತ್ತಿದ್ದ ತನ್ನದೇ ಆದ ಅಭಿಮಾನಿ ಸಂಘಗಳನ್ನು ಹೊಂದಿದ್ದ ನಾಯಕ. ಇಂದು ತಂದೆ, ಹಿರಿಯ ಅಧಿಕಾರಿ, ಖಳ ಹೀಗೆ ದೊರೆತ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದರು. ಒಮ್ಮೆ ಸ್ಕ್ರಿಪ್ಟ್ ಓದಿಕೊಳ್ಳುತ್ತಿದ್ದರು ಅಷ್ಟೇ. ನಿರ್ದೇಶಕರು ಆ್ಯಕ್ಷನ್ ಎಂದ ಕೂಡಲೇ ಪಾತ್ರದಲ್ಲಿ ತಲ್ಲೀನವಾಗಿ ಬಿಡುತ್ತಿದ್ದರು. ಎಲ್ಲ ನಿರ್ದೇಶಕರಿಗೂ ಅಚ್ಚುಮೆಚ್ಚಿನ ಒನ್ ಟೇಕ್ ಆರ್ಟಿಸ್ಟ್!

ಆ ದಿನ ಅವರು ಎಂದಿನಂತಿಲ್ಲ ಎನ್ನುವುದು ನನ್ನ ಮನಸ್ಸಿನಲ್ಲಿ ಕಾಡುತ್ತಿತ್ತು. ಡೈರೆಕ್ಟರ್ ಪ್ಯಾಕಪ್ ಎಂದ ಕೂಡಲೇ ಯಾರೋ ಭೋರೆಂದು ಅಳುತ್ತಿದ್ದ ಸದ್ದು ಕೇಳುತ್ತಿತ್ತು. ಅಳುತ್ತಿದ್ದ ಧ್ವನಿ ರಮಾನಾಥರದು ಎಂದು ನನ್ನ ಹಾಳು ಹೃದಯಕ್ಕೆ ಅನ್ನಿಸುತ್ತಿತ್ತು. ರಮಾನಾಥರಾದರೂ ಏಕೆ ಅಳುತ್ತಾರೆ ಎಂದೆಲ್ಲ ಆಲೋಚಿಸುತ್ತಾ ಅಲ್ಲಿಗೆ ಓಡಿದೆ. ಅರವತ್ತರ ರಮಾನಾಥ್ ಎಂಬ ನಟ ಹಸುಕಂದಮ್ಮನಂತೆ ಅಳುತ್ತಿದ್ದ ದೃಶ್ಯ ನೋಡಿ ನನ್ನ ಕಣ್ಣಾಲಿಗಳು ತುಂಬಿ ಬಂದವು. ಅವರಿಗೇನಾಯ್ತು ಎನ್ನುವುದು ನನಗೆ ಮಾತ್ರ ಅನುಮಾನ ಮೂಡಿತು. ಅದು ನಿಜವೂ ಆಗಿತ್ತು.

ಅವರ ಪತ್ನಿ ಈ ಲೋಕ ಬಿಟ್ಟು ಹೊರಟು ಹೋಗಿದ್ದಳು! ಆಕೆಗೆ ಅಷ್ಟೇನೂ ಅನಾರೋಗ್ಯವಿರಲಿಲ್ಲ. ಆಕೆ ಹಾಸಿಗೆಯಿಂದ ಏಳಲಾಗುತ್ತಿರಲಿಲ್ಲ, ಅಷ್ಟೇ. ಕೆಲವೊಮ್ಮೆ ರಮಾನಾಥರು ಇಲ್ಲದೇ ಇರುವಾಗ ನಿಯಮಿತವಾಗಿ ಮಾತ್ರೆಗಳನ್ನು ಸೇವಿಸುವುದು ಮರೆತುಬಿಡುತ್ತಿದ್ದರು. ಅದೇ ದಿನ ಮಧ್ಯಾಹ್ನ ಅವರ ಪತ್ನಿ ಇಹಲೋಕ ತ್ಯಜಿಸಿದ್ದು ಗೊತ್ತಾದರೂ ನಿರ್ಮಾಪಕರಿಗೆ ತೊಂದರೆಯಾಗಬಾರದು ಎಂದು ಇಡೀ ದಿನ ಶೂಟಿಂಗ್‌ನಲ್ಲಿ ಭಾಗವಹಿಸಿದ್ದರು. ಪತ್ನಿ ಮರಣಿಸಿದ್ದು ತಿಳಿಸಿ ಅಲ್ಲಿಂದ ಹೊರಡುವುದು ಅವರಿಗೆ ಕಷ್ಟವಾಗಿರಲಿಲ್ಲ. ಆದರೆ ಅವರು ತಮ್ಮ ವೃತ್ತಿ, ಜವಾಬ್ದಾರಿಯನ್ನು ವೈಯಕ್ತಿಕ ಕಾರಣಕ್ಕೆ ನಿರ್ಲಕ್ಷಿಸಲಿಲ್ಲ.

ಯಶಸ್ಸಿನ ಉತ್ತುಂಗದಲ್ಲಿದ್ದಾಗಲೇ ರಮಾನಾಥರು ಮದುವೆಯಾಗಿದ್ದರು. ಆಕೆ ಸಿನಿಮಾ ರಂಗಕ್ಕೆ ಯಾವ ರೀತಿಯಲ್ಲೂ ಸಂಬಂಧಿಸಿರಲಿಲ್ಲ. ಎಲ್ಲರಂತೆ ಹಿರಿಯರು ನೋಡಿದ್ದ ಹುಡುಗಿಯನ್ನು ಮದುವೆಯಾಗಿ ಇಬ್ಬರು ಗಂಡು ಮಕ್ಕಳ ತಂದೆಯಾಗಿದ್ದರು, ನಾಲ್ವರು ಮೊಮ್ಮಕ್ಕಳಿಗೆ ಅಜ್ಜನಾಗಿದ್ದರು.

ಅವರ ಮಕ್ಕಳು ತಂದೆ, ತಾಯಿಯ ಜೊತೆಯಲ್ಲೇನೂ ಇರಲಿಲ್ಲ. ಅವರ ಪಾಡಿಗೆ ಅವರು ಚೆನ್ನಾಗಿದ್ದರು. ಸ್ವತಃ ಸೂಪರ್‌ಸ್ಟಾರ್ ಆಗಿದ್ದಾಗಲೇ ರಮಾನಾಥ್ ತನ್ನ ಮಕ್ಕಳಿಗೆ ಚಿತ್ರರಂಗದ ಸೋಂಕು ತಾಕದಂತೆ ಬೆಳೆಸಿದ್ದರು. ಅವರ ಪತ್ನಿ ಕೂಡಾ ಅಷ್ಟೇ. ಆಕೆ ಕೌಟುಂಬಿಕ ಕಾರ್ಯಕ್ರಮಗಳ ಹೊರತಾಗಿ ಸಿನಿಮಾಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಎಲ್ಲಿಯೂ ಕಾಣಿಸಿಕೊಳ್ಳುತ್ತಿರಲಿಲ್ಲ.